## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 21-09-2022

**ಚಿಂತಾಕಿ ಪೊಲೀಸ ಠಾಣೆ ಯು.ಡಿ.ಆರ್ ಸಂಖ್ಯೆ: 06/2022 ಕಲಂ 174 (ಸಿ) ಸಿ.ಆರ್.ಪಿ.ಸಿ :-**

ದಿನಾಂಕ 20/09/2022 ರಂದು 08;30 ಗಂಟೆಗೆ ಬೀದರ ಸರ್ಕಾರಿ ಆಸ್ಪತ್ರೆಯಿಂದ ಎಮ್.ಎಲ್.ಸಿ ಮಾಹಿತಿ ಬಂದ ಮೇರೆಗೆ ನಾನು ಠಾಣೆಯಿಂದ 08;45 ಗಂಟೆಗೆ ಹೊರಟು 10;00 ಗಂಟೆಗೆ ಬೀದರ ರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದಾಗ ಅಲ್ಲಿ ಹಾಜರಿದ್ದ ಫಿರ್ಯಾದಿ ಶ್ರೀಮತಿ ಲಲಿತಾಬಾಯಿ ಗಂಡ ರಾಮರಾವ ಮಾರಗೂಳೆಸಾ: ಕಾಕನಾಳ ರವರು ಒಂದು ಕನ್ನಡದಲ್ಲಿ ಬರೆದ ಲಿಖಿತ ದೂರು ನೀಡಿದ ಸಾರಂಶವೆನೆಂದರೆ ನನ್ನ ಗಂಡ ರಾಮರಾವ ಇವರು ಕೂಲಿಕೆಲಸ ಮಾಡಿಕೊಂಡಿದ್ದು ನಮ್ಮ ಕಿರಿಯ ಮಗಳಾದ ಜಗದೇವಿ ಇವಳಿಗೆ ಮೂರು ರ್ಷದ ಹಿಂದೆ ಕೊಳ್ಳೂರ ಗ್ರಾಮದ ನರಸಪ್ಪಾ ತಂದೆ ಸುಬಾಷನೊಂದಿಗೆ ನಮ್ಮ ಹಿರಿಯರ ಸಮ್ಮುಖದಲ್ಲಿ ಮದುವೆ ಮಾಡಿಕೊಟ್ಟಿರುತ್ತೆವೆ ಅವರಿಗೆ ಒಂದುವರೆ ರ್ಷದ ಸುಬಾಂಗಿ ಅಂತ ಮಗಳು ಇರುತ್ತಾಳೆ. ದಿನಾಂಕ 16/09/2022 ರಂದು ಸಾಯಂಕಾಲ 06;00 ಗಂಟೆಗೆ ನಮ್ಮ ಅಳಿಯನಾದ ನರಸಪ್ಪಾ ಇವನು ನನ್ನ ಗಂಡನ ಪೋನಿಗೆ ಕರೆ ಮಾಡಿ ನಿಮ್ಮ ಮಗಳು ಇಂದು ಸಾಯಂಕಾಲ 05;00 ಗಂಟೆ ಸೂಮಾರಿಗೆ ನಮ್ಮ ಮನೆಯ;ಲ್ಲಿ ಇದ್ದ ತರಕಾರಿಗೆ ಹೊಡೆಯುವ ಔಷಧ ಕುಡಿದು ವಾಂತಿ ಮಾಡಿಕೊಳ್ಳುವಾಗ ಅವಳಿಗೆ ಔರಾದ ರ್ಕಾರಿ ಆಸ್ಪತ್ರೆಗೆ ತಂದು ಇಲಾಜು ಕುರಿತು ತಂದು ಸೇರಿಕ ಮಾಡಿರುತ್ತೆವೆ ಅಂತ ತಿಳಿಸಿದ ಮೇರೆಗೆ ನಾನು ಮತ್ತು ನನ್ನ ಗಂಡ ಇಬ್ಬರು ಬೀದರ ನಗರದ ಗುದಗೆ ಆಸ್ಪತ್ರೆಯಲ್ಲಿ ಬಂದು ನೋಡಲು ಅವಳಿಗೆ ಅಲ್ಲಿನ ವೈಧ್ಯರು ಚಿಕಿತ್ಸೆ ಮಾಡುತ್ತಿದ್ದರು ನನ್ನ ಮಗಳು ಮಾತನಾಡುವ ಸ್ಥಿತಿಯಲ್ಲಿ ಇದ್ದಿರುವುದಿಲ್ಲಾ ಅದೇ ಆಸ್ಪತ್ರೆಯಲ್ಲಿ ಹಾಜರಿದ್ದ ನನ್ನ ಅಳಿಯ ನರಸಪ್ಪಾ ಇವರಿಗೆ ಏನಾಗಿದೆ ಅಂತ ವಿಚಾರಿಸಲು ಅವರು ನಮಗೆ ಹೇಳಿದೆನೆಂದರೆ ನಿಮ್ಮ ಮಗಳು 05 ತಿಂಗಳ ಹಿಂದೆ ಒಂದು ಖಾಸಗಿ ಸಂಘಿನಲ್ಲಿ 20 ಸಾವಿರ ರೂಪಾಯಿ ಲೋನ್ ಪಡೆದಿದ್ದು ನಾನು ಸದರಿ ಹಣ ಕುಟುಂಬ ನರ್ವಹಣೆಗೆ ಹಾಗು ಇತರೆ ಕೆಲಸಕ್ಕೆ ರ್ಚು ಆಗಿದ್ದು ನಂತರ ಸದರಿ ಹಣ ಮರಳಿ ಕಟ್ಟಲು ಸಂಘದವರು ಮನೆಯ ಹತ್ತಿರ ಬಂದು ಹಣ ಕಟ್ಟುವಂತೆ ದಿನಾಲು ಬಂದು ಕೇಳುತ್ತಿದ್ದರು ನಾನು ಅವರಿಗೆ ನನ್ನ ಕೆಲಸ ಸರಿಯಾಗಿ ನಡೆಯುತ್ತಿಲ್ಲಾ ಸ್ವಲ್ಪ ಸಮಯವಕಾಶ ಕೇಳಿದರು ಅವರು ಹಾಗೆ ಬಂದು ಕೇಳುತ್ತಿದರು ನನ್ನ ಹೆಂಡತಿ ಕೂಡಾ ಅವರು ಕೊಟ್ಟಿದ್ದ ಹಣ ಕಟ್ಟುವಂತೆ ಹೇಳುತ್ತಿದಳು ನಾನು ಅವಳಿಗೆ ಕೂಡಾ ನನ್ನ ಕೆಲಸ ಆದ ನಂತರ ಮರಳಿ ಕೊಡುತ್ತೆನೆ ಅಂತ ತಿಳಿಸಿದ್ದು ಇರುತ್ತದೆ. ದಿನಾಂಕ 16/09/2022 ರಂದು ಮುಂಜಾನೆ ಎಂದಿನಂತೆ ನನ್ನ ಕೆಲಸಕ್ಕೆ ಹೊಗಿದ್ದು ಮರಳಿ ಸಾಯಂಕಾಲ 04;30 ಗಂಟೆಗೆ ನಮ್ಮ ಮನೆಗೆ ಬಂದಾಗ ನನ್ನ ಹೆಂಡತಿ ಮನೆಯಲ್ಲಿ ಇದ್ದಳು ಅವಳು ನನಗೆ ಇಂದು ಕೂಡಾ ಸಂಘದ ಹಣ ಕಟ್ಟಿದಿರಿ ಇಲ್ಲಾ ಅಂತ ಕೇಳಿದಳು ನಾನು ಕೆಲಸ ಮಾಡಿದ ಜಾಗೆಯಿಂದ 3000 ರೂ ಜಮಾ ಆಗಿವೆ ಇನ್ನು 2000 ರೂ ಜಮಾ ಮಾಡಿ ಸಂಘದ ಹಣ ಕಟ್ಟುತ್ತೆನೆ ಅಂದಾಗ ಅವಳು ನಿಮದು ದಿನನಿತ್ಯ ಇದೆ ರೀತಿ ಹೇಳುತ್ತಿರಿ ಅಂತ ನನಗೆ ಸಿಟ್ಟಿಗೆ ಬಂದು ಮನೆಯಲ್ಲಿ ಹೊದಳು ನಾನು ಮನೆಯಲ್ಲಿ ಹೊದಾಗ ನನ್ನ ಹೆಂಡತಿ ನನಗೆ ನೀವು ಸಂಘದ ಹಣ ಕಟ್ಟದಿದ್ದರೆ ನಾನು ವಿಷ ಕುಡಿದು ಸಾಯುತ್ತೆನೆ ಅಂತ ಅಂದು ಮನೆಯಲ್ಲಿ ಹೊಗಿ ನಮ್ಮ ಮನೆಯಲ್ಲಿ ಇಟ್ಟಿದ್ದ ತರಕಾರಿಗೆ ಹೊಡೆಯುವ ಔಷಧ ಕುಡಿದ ವಾಂತಿ ಮಾಡಿಕೊಳ್ಳುತ್ತಿದಳು ನಾನು ಅವಳ ಹತ್ತಿರ ಹೋಗಿ ಅವಳ ಬಾಯಿಯಿಂದ ವಿಷದ ವಾಸನೆ ಬರುತ್ತಿತ್ತು ಅಷ್ಟರಲ್ಲಿ ನಾನು ಮತ್ತು ನಮ್ಮ ಅಣ್ಣ ಬಸವರಾಜ ಇಬ್ಬರು ಒಂದು ಖಾಸಗಿ ಕ್ರುಜರ್ ಜೀಪಿನಲ್ಲಿ ಹಾಕಿಕೊಂಡು ಔರಾದ ರ್ಕಾರಿ ಆಸ್ಪತ್ರೆಗೆ ತಂದು ಚಿಕಿತ್ಸೆ ಕುರಿತು ಸೆರಿಸಿದ್ದು ಇರುತ್ತದೆ. ನಂತರ ಹೆಚ್ಚಿನ ಚಿಕಿತ್ಸೆ ಕುರಿತು ಬೀದರ ನಗರದ ಗುದಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ದಿನಾಂಕ 20/09/2022 ರಂದು 08;00 ಗಂಟೆಗೆ ನನ್ನ ಮಗಳಿಗೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾಳೆ ನನ್ನ ಮಗಳ ಸಾವಿನ ಬಗ್ಗೆ ಮುಂದಿನ ಕಾನೂನು ಕ್ರಮ ಜರುಗಿಸುವಂತೆ ದೂರು ಕೊಟ್ಟ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ. ಲಿಖಿತ ದೂರನ್ನು

ಸ್ವಿಕರಿಸಿಕೊಂಡು ಲಿಖಿತದೂರಿನ ಸಾರಂಶದ ಮೇರೆಗೆ ಚಿಂತಾಕಿ ಪೊಲೀಸ ಠಾಣೆಗೆ ಮರಳಿ 12:00 ಗಂಟೆಗೆ ಚಿಂತಾಕಿ ಪೊಲೀಸ ಠಾಣೆ ಯುಡಿಆರ್ ನಂ 06/2022 ಕಲಂ 174 (ಸಿ) ಸಿಆರ್. ಪಿಸಿ ನೆದ್ದರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಕೊಳ್ಳಲಾಗಿದೆ

**ಭಾಲ್ಕಿ ನಗರ ಠಾಣೆ: ಪ್ರಕರಣ ಸಂ: 155/2022 ಕಲಂ 454,457,380 ಐಪಿಸಿ:-**

ದಿನಾಂಕ 20/09/2022 ರಂದು 11:00 ಗಂಟೆಗೆ ಶ್ರೀ ಸಂಜೀವಕುಮಾರ ತಂದೆ ರಾಜೆಪ್ಪಾ ಬಿರಾದಾರ ಸಾ: ತೆಗಂಪೂರ ಸದ್ಯ ಲೇಕ್ಚರ ಕಾಲೋನಿ ಭಾಲ್ಕಿ ರವರು ಠಾಣೆಗೆ ಬಂದು ದೂರು ಸಲ್ಲಿಸಿದ್ದು ಸಾರಾಂಶವೇನೆಂದರೆ, ಭಾಲ್ಕಿ ನಗರದಲ್ಲಿರುವ ಸಂಗಮೇಶ್ವರ ಪಿ.ಯೂ. ಕಾಲೇಜನಲ್ಲಿ ನಾನು ಪ್ರಿನ್ಸಿಪಾಲ ಅಂತ ಕೆಲಸ ಮಾಡುತ್ತೇನೆ. ದಿನಾಂಕ 17/09/2022 ರಂದು ಮುಂಜಾನೆ 07:30 ಗಂಟೆಗೆ ಕಾಲೇಜಗೆ ಬಂದು ಕಾಲೇಜ ತೆರೆದು ಕಲ್ಯಾಣ ರ್ನಾಟಕ ವಿಮೋಚನಾ ದಿನಾಚರಣೆ ಅಂಗವಾಗಿ ಧ್ವಜಾರೋಹಣ ಕರ್ಯಕ್ರಮ ಮಾಡಿ ನಂತರ ಸಾಯಂಕಾಲ 4 ಗಂಟೆಯ ವರೆಗೆ ಕ್ಲಾಸ ತೆಗೆದುಕೊಂಡು ನಂತರ ಕ್ಲಾಸ ಮುಗದಿದ್ದ ನಂತರ ಕಾಲೇಜ ಬಂದ ಮಾಡಿ ಹೋಗಿರುತ್ತೇವೆ. ದಿನಾಂಕ 19/09/2022 ರಂದು ಮುಂಜಾನೆ 09:30 ಗಂಟೆಗೆ ನಾನು ಮತ್ತು ನಮ್ಮ ಕಾಲೇಜಿನ ಉಪನ್ಯಾಸಕರಾದ ಶ್ರೀ ಶೇಷೆರಾವ ತಂದೆ ಶಂಕರರಾವ ಬಿರಾದಾರ ಸಾ: ಮದಕಟ್ಟಿ ರವರು ಕೂಡಿ ಸಂಗಮೇಶ್ವರ ಪಿ.ಯೂ. ಕಾಲೇಜಗೆ ಹೋಗಿದಾಗ ಕಾಲೇಜಿನ ಆಫೀಸ ಕೋಣೆ ತೆರೆದಿದನ್ನು ನೋಡಿ ನಾವು ಇಬ್ಬರು ಒಳಗಡೆ ಹೋಗಿ ನೋಡಲು ಆಫೀಸನಲ್ಲಿರುವ ಒಂದು ಝೇರಾಕ್ಸ ಮಷಿನ ಇರಲಿಲ್ಲಾ ನಂತರ ಆಫೀಸನಲ್ಲಿರುವ ಅಲಮಾರಾಗಳು ನೋಡಲು ಎರಡು ಅಲಮಾರಾಗಳು ಸಹ ಒಡೆದಿದ್ದನ್ನು ನೋಡಿ ಒಂದು ಅಲಮಾರದಲ್ಲಿ ನೋಡಲು ಒಳಗಡೆ ಇದ್ದ ನಗದು ಹಣ 4000/- ರೂ ಸಹ ಇರಲಿಲ್ಲಾ. ನಂತರ ನಾವು ಕಾಲೇಜನಲ್ಲಿ ಹಾಗೂ ಕಾಲೇಜಿನ ಸುತ್ತಮುತ್ತಲು ನೋಡಲು ಯಾವುದೆ ಮಾಹಿತಿ ಸಿಕ್ಕಿರುವುದಿಲ್ಲಾ. ದಿನಾಂಕ 17/09/2022 ರಂದು ಸಾಯಂಕಾಲ 4 ಗಂಟೆಯಿಂದ ದಿನಾಂಕ 19/09/2022 ರಂದು ಮುಂಜಾನೆ 09:30 ಗಂಟೆಯ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಸಂಗಮೇಶ್ವರ ಪಿ.ಯೂ. ಕಾಲೇಜಿನ ಆಫೀಸ ಕೀಲಿ ತೆಗೆದು ಒಳಗಡೆ ಹೋಗಿ ಆಫೀಸದಲ್ಲಿರುವ ಒಂದು ಝೇರಾಕ್ಸ ಮಷಿನ ಅ:ಕಿ; 20,000/- ರೂ ಹಾಗೂ ಒಂದು ಕಬ್ಬಿಣದ ಅಲಮಾರಾದ ಕೀಲಿ ಮುರಿದು ಒಳಗಡೆ ಇದ್ದ ನಗದು ಹಣ 4000/- ರೂ ಕಳವು ಮಾಡಿಕೊಂಡು ಹೋಗಿರುತ್ತಾರೆ. ನಮ್ಮ ಕಾಲೇಜ ಆಫೀಸ ಕೋಣೆ ಕಳವು ಆಗಿದ್ದ ಬಗ್ಗೆ ನಮ್ಮ ಮೇಲಾಧಿಕಾರಿಯವರಿಗೆ ವಿಚಾರಿಸಿ ಠಾಣೆಗೆ ಬಂದು ದೂರು ನೀಡಲು ತಡವಾಗಿರುತ್ತದೆ ಅಂತ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಖೆ ಕೈಕೊಳ್ಳಲಾಗಿದೆ.

**ಭಾಲ್ಕಿ ಗ್ರಾಮಾಂತರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 136/2022 ಕಲಂ 379 ಐಪಿಸಿ :-**

ದಿನಾಂಕ: 20-09-2022 ರಂದು 1445 ಗಂಟೆಗೆ ಫರ್ಯಾದಿ ಶ್ರೀ ಆನಂದ ತಂದೆ ಲಕ್ಷ್ಮಣರಾವ ಬಿರಾದಾರ ವಯ: 44 ರ್ಷ ಜಾ: ಮರಾಠಾ ಉ: ಒಕ್ಕಲುತನ ಸಾ: ಆಳಂದಿ ಇವರು ಠಾಣೆಗೆ ಹಾಜರಾಗಿ ದೂರು ರ್ಜಿ ಸಲ್ಲಿಸಿದ್ದು ಸಾರಾಂಶವೆನೆಂದ್ದರೆ, ನಮಗೆ ಆಳಂದಿ ಶಿವಾರದಲ್ಲಿ ಸರ್ವೆ ನಂ 88/2 ರಲ್ಲಿ ಇರುವ ಒಂದು ಎಕರೆ ಜಮೀನಿನಲ್ಲಿ ನಾನು ದತ್ತಾ ಮಂದಿರ ನರ್ಮಿಸಿ ಅಲ್ಲಿ ಜಾನುವಾರುಗಳನ್ನು ಸಾಕುತ್ತಿದ್ದೇನೆ. ನಮ್ಮ ಬಳಿ ಒಟ್ಟು 26 ಜಾನುವಾರುಗಳು ಇದ್ದು, ಅದರಲ್ಲಿ 03 ಎತ್ತುಗಳು, 11 ಹೋರಿಗಳು ಹಾಗೂ 12 ಆಕಳುಗಳು ಇರುತ್ತವೆ. ಇವುಗಳನ್ನೆಲ್ಲಾ ನಮ್ಮ ನೌಕರಿ ಆಳು ವಿಜಯಕುಮಾರ ತಂದೆ ಗೋವಿಂದ ಮೇತ್ರೆ ವಯ: 24 ವರ್ಷ ಜಾ: ಎಸ.ಟಿ ಗೊಂಡ ಉ: ಒಕ್ಕಲುತನ ಸಾ: ಆಳಂದಿ ಇವನು ನೋಡಿಕೊಂಡು ಇರುತ್ತಾನೆ. ಇವನು ದಿನಾಲು ನಮ್ಮೂರ ಶಿವಾರದಲ್ಲಿಯ ನಮ್ಮ ಜಮೀನಿನಲ್ಲಿ ಮೇಯಿಸಿಕೊಂಡು ಬಂದು ಸಾಯಂಕಾಲ ದತ್ತಾ ಮಂದಿರ ಆವರಣದಲ್ಲಿ ಕಟ್ಟುತ್ತಾನೆ. ನಾನು ಉದಗೀರದಲ್ಲಿ ಇರುವುದ್ದರಿಂದ ದಿನಾಲು

ಬಂದು ನೋಡಿಕೊಂಡು ಹೋಗುತ್ತೇನೆ. ದಿನಾಂಕ: 20/09/2022 ರಂದು ಮುಂಜಾನೆ 07:00 ಗಂಟೆಯ ಸುಮಾರಿಗೆ ನನ್ನ ತಂದೆಯವರಾದ ಲಕ್ಷ್ಮಣರಾವ ತಂದೆ ದಶರಥರಾವ ಬಿರಾದಾರ ಇವರು ಫೋನ ಮಾಡಿ ನನಗೆ ತಿಳಿಸಿದ್ದೇನೆಂದ್ದರೆ, ನಮ್ಮ ಜಾನುವಾರಗಳಲ್ಲಿ 03 ದನಗಳು ಬಿಟ್ಟಿದ್ದು ಇದ್ದು, ಇನ್ನು 06 ಜಾನುವಾರಗಳು ಅವುಗಳಲ್ಲಿ 03 ಆಕಳು ಮತ್ತು 03 ಹೋರಿಗಳು ಕಾಣಿಸುತ್ತಿಲ್ಲ. ದವಣಿಯಲ್ಲಿ ಹಗ್ಗ ಕಟಮಾಡಿದಂತೆ ಕಾಣಯತ್ತಿದೆ ಯಾರೋ ಕಳವು ಮಾಡಿದಂತೆ ಇರುತ್ತದೆ. ಅಂತ ಹೇಳಿದ್ದರಿಂದ ನಾನು ನಮ್ಮ ಆಳು ವಿಜಯಕುಮಾರ ರವರಿಗೆ ಬೇಗ ದತ್ತಾ ಮಂದಿರಕ್ಕೆ ಹೋಗಲು ಹೇಳಿ ೦೯:೦೦ ಗಂಟೆಯ ಸುಮಾರಿಗೆ ದತ್ತಾ ಮಂದಿರ ಬಳಿ ಬಂದು ನೋಡಿದ್ದು ಇದರಲ್ಲಿ 03 ಹೋರಿಗಳು ಮತ್ತು 03 ಆಕಳು ಇರಲ್ಲಿಲ್ಲ. ಅವುಗಳನ್ನು ನನ್ನ ಆಳು ವಿಜಯಕುಮಾರ ಎಲ್ಲ ಜಾನುವಾರುಗಳ ಜೊತೆ ಸಾಯಂಕಾಲ 07:00 ಗಂಟೆಗೆ ಕಟ್ಟಿದ್ದು ಇರುತ್ತದೆಂದು ತಿಳಿಸಿರುತ್ತಾನೆ. ಕಳುವಾದ ದನಗಳ ವಿವರ ಈ ಕೆಳಗಿನಂತೆ ಇರುತ್ತದೆ. 1) ಒಂದು ಹೋರಿ, ಕರಿಯ ಬಣ್ಣದ್ದು ತಲೆಯಲ್ಲಿ ಚಂದರಿ ಇರುತ್ತದೆ. ಅಂದಾಜು 03 ವರ್ಷ ವಯಸ್ಸಿನದು, ಇದರ ಅ: ಕಿ: 40,000/- ರೂ 2) ಒಂದು ಹೋರಿ ಕೆಂಪು ಬಿಳಿ ಮಿಶ್ರಿತ ಬಣ್ಣದ್ದು 03 ವರ್ಷ ವಯಸ್ಸಿನದು ಅ: ಕಿ: 35,000/- ರೂ 3) ಒಂದು ಬಿಳಿ ಬಣ್ಣದ ಹೋರಿ ಅಂದಾಜು 03 ವರ್ಷ ವಯಸ್ಸಿನದು ಅ: ಕಿ: 45,000/- 4) ಒಂದು ಬಿಳಿ ಬಣ್ಣದ ಆಕಳು ಮುಖ ಕಪ್ಪುಬಣ್ಣದು ಅಂದಾಜು 04 ವರ್ಷ ವಯಸ್ಸಿನದು ಹಾಲು ಕೊಡುವುದು ಅ: ಕಿ: 45,000/- ರೂ 5) ಒಂದು ಕರಿಯ ಬಣ್ಣದ 4 ವರ್ಷದ ಆಕಳು ಅ: ಕಿ: 40,000/- ರೂ 6) ಒಂದು ಬಿಳಿ ಬಣ್ಣದ ಆಕಳು ಮೈಯಲ್ಲಿ ಕರಿ ಚುಕ್ಕೆವುಳ್ಳದ್ದು ಅ: ಕಿ: 5 ವರ್ಷದ್ದು ಅ: ಕಿ; 35,000/- ಹೀಗೆ ಎಲ್ಲವು ಸೇರಿ ಅ: ಕಿ: 2,40,000/- ನೇದು ಕಳುವಾಗಿರುತ್ತವೆ. ನಮ್ಮ ಜಾನುವರುಗಳನ್ನು ನಿನ್ನೆ ದಿನಾಂಕ: 19/09/2022 ರಂದು ಸಾಯಂಕಾಲ 07:00 ಗಂಟೆಯಿಂದ ದಿನಾಂಕ: 20/09/2022 ರ 06:00 ಗಂಟೆಯ ಮಧ್ಯಾವಧಿಯಲ್ಲಿ ಯಾರೋ ಕಳ್ಳರು ನಮ್ಮೂರ ಶಿವಾರದಲ್ಲಿ ನಮ್ಮ ಹೊಲದಲ್ಲಿರುವ ದತ್ತಾ ಮಂದಿರದ ಆವರಣದಲ್ಲಿಂದ ದವಣಿಯಲ್ಲಿ ಕಟ್ಟಿದ ಹಗ್ಗವನ್ನು ಕಟ ಮಾಡಿಕೊಂಡು ಕಳವು ಮಾಡಿಕೊಂಡು ಹೋಗಿದ್ದು ಇರುತ್ತದೆ. ನಮ್ಮ ಆವರಣದಲ್ಲಿ ಅವರು 06 ಹೋರಿ 3 ಆಕಳು ಒಯ್ದಂತೆ ಇದ್ದು ಅವುಗಳಲ್ಲಿ 03 ಹೋರಿ ಮರಳಿ ಕಳ್ಳರಿಂದ ತಪ್ಪಿಸಿಕೊಂಡು ಆವರಣಲ್ಲಿ ಬಂದು ನಿಂತಿದಂತೆ ಇದ್ದು, ಉಳಿದು 03 ಹೋರಿ 03 ಆಕಳು ಕಳವು ಮಾಡಿಕೊಂಡು ಹೋಗಿರುತ್ತಾರೆ. ನಂತರ ನಾವು ಜಾನುವಾರಗಳು ನಮ್ಮ ಊರಿನ ಶಿವಾರದಲ್ಲಿ ಹಾಗು ಡೊಣಗಾಪೂರ, ಸಂಗಮ ಹಾಗು ಹುಣಜಿ ಕಡೆಗೆಲ್ಲಾ ಹುಡುಕಿದ್ದು ಸಿಕ್ಕಿರುವುದಿಲ್ಲ ಸಿಗದೇ ಇರುವುದ್ದಕ್ಕೆ ಈಗ ತಡವಾಗಿ ಠಾಣೆಗೆ ಬಂದು ದೂರು ಕೊಡುತ್ತಿದ್ದೇನೆ ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಖಟಕಚಿಂಚೋಳ್ಳಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 80/2022 ಕಲಂ. 32, 34 ಕರ್ನಾಟಕ ಅಬಕಾರಿ ಕಾಯ್ದೆ :-**

ದಿನಾಂಕ: 20/09/2022 ರಂದು ಪಿಎಸ್ಐ ರವರಿಗೆ ಅನಧೀಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿರವು ಬಗ್ಗೆ ಖಚಿತ ಭಾತ್ಮಿ ಬಂಧ ಮೇರೆಗೆ ಸಿಬ್ಬಂದಿ ಹಾಗೂ ಪಂಚರೊಂದಿಗೆ ಕಪಲಾಪೂರ ಕ್ರಾಸ್ ಹತ್ತಿರ 11:20 ಗಂಟೆಗೆ ಹೊಗಿ ಕಪಲಾಪೂರ ಕ್ರಾಸ್ ಹತ್ತಿರ ಭಾಲ್ಕಿ – ಹುಮನಾಬಾದ ರೋಡಿನ ಪಕ್ಕದಲ್ಲಿರುವ ಶ್ರೀ ಸಾಯಿ ದಾಬಾದ ಮುಂದುಗಡೆ ಇರುವ ಖುಲ್ಲಾ ಜಾಗೆಯಲ್ಲಿ ಎರಡು ಜನ ವ್ಯಕ್ತಿಗಳು ಪ್ಲಾಸ್ಟೀಕ್ ಚಿಲಗಳಲಲ್ಲಿ ಅನಧಿಕೃತವಾಗಿ ಸರಾಯಿ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುತ್ತಿರುವುದನ್ನು ನಾನು ಖಚಿತ ಪಡಿಸಿಕೊಂಡು ಸದರಿ ಪಂಚರ ಸಮಕ್ಷಮ ನಮ್ಮ ಪೊಲೀಸ ಸಿಬ್ಬಂದಿಯವರ ಸಹಾಯದೊಂದಿಗೆ ಸರಾಯಿ ಮಾರಾಟ ಮಾಡುತ್ತಿರುವ ವ್ಯಕ್ತಿಗಳ ಮೇಲೆ 11:30 ಗಂಟೆಗೆ ದಾಳಿ ಮಾಡಿ ಸದರಿ ವ್ಯಕ್ತಿಗಳಿಗೆ ಹಿಡಿದುಕೊಂಡಿದ್ದು, ಈ ವೇಳೆಯಲ್ಲಿ ನಾನು ಸದರಿ ವ್ಯಕ್ತಿಗಳ ಹೇಸರು ಮತ್ತು ವಿಳಾಸ ವಿಚಾರಿಸಲು 1) ಸಂತೋಷ ತಂದೆ ವೆಂಕಟ ಶೇರಿಕಾರ ವಯ: 28 ವರ್ಷ ಜಾ: ಎಸ್.ಟಿ ಗೊಂಡ ಉ: ಒಕ್ಕಲುತನ ಸಾ: ಕುಮಾರ ಚಿಂಚೋಳಿ ತಾ: ಹುಮನಾಬಾದ, 2) ಸೋಮನಾಥ ತಂದೆ ಬಸವರಾಜ ಮಲ್ಲಾಪೂರ ವಯ: 34 ವರ್ಷ ಜಾ: ಲಿಂಗಾಯತ, ಉ: ಕೂಲಿ ಕೆಲಸ ಸಾ: ಡಾವರಗಾಂವ ಅಂತ ತಮ್ಮ-ತಮ್ಮ ಹೆಸರು ಮತ್ತು ವಿಳಾಸ ತಿಳಿಸಿದ್ದು, ಈ ವೇಳೆಯಲ್ಲಿ ನಾನು ಸದರಿ ವ್ಯಕ್ತಿಗಳ ಮುಂದುಗಡೆ ಇರುವ

ಪ್ಲಾಸ್ಟೀಕ್ ಚಿಲಗಳನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲು ಅದರಲ್ಲಿ 1ಕಿಂಗ್ ಪಿಶರ್ ಸ್ಟ್ರಾಂಗ್ 650 ಎಮ್.ಎಲ್ ನ ಚೀಲಗಳಿದ್ದು, ಒಂದರ ಬೆಲೆ 160 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 2400/- ರೂಪಾಯಿ ಇರುತ್ತದೆ. 2) ಕಿಂಗ್ ಪಿಶರ್ ಪ್ರಿಮಿಯಮ್650 ಎಮ್.ಎಲ್ ನ 04 ಬಾಟಲಗಳಿದ್ದು, ಒಂದರ ಬೆಲೆ 160 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 640/- ರೂಪಾಯಿ ಇರುತ್ತದೆ. 3) ಬಡ್ವೈಸರ್ ಮ್ಯಾಗನಮ್650 ಎಮ್.ಎಲ್ ನ 03ಬೀಯರ್ ಬಾಟಲಗಳಿದ್ದು, ಒಂದರ ಬೆಲೆ 200 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 600/- ರೂಪಾಯಿ ಇರುತ್ತದೆ. 4)ಬಡ್ವೆಸರ್ ಪ್ರಿಮಿಯಮ್650 ಎಮ್.ಎಲ್ ನ 03ಬೀಯರ್ ಬಾಟಲಗಳಿದ್ದು, ಒಂದರ ಬೆಲೆ 185 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 555/- ರೂಪಾಯಿ ಇರುತ್ತದೆ. 5) ರಬನ್ ಸ್ಟ್ರಾಂಗ್650 ಎಮ್.ಎಲ್ ನ 02ಬೀಯರ್ ಬಾಟಲಗಳಿದ್ದು, ಒಂದರ ಬೆಲೆ 160 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 320/- ರೂಪಾಯಿ ಇರುತ್ತದೆ. 6)ಎಮ್ ಸಿ ಡೊವೆಲ್ಸ 180 ಎಮ್.ಎಲ್ ನ 04ವಿಸ್ಕಿ ಬಾಟಲಗಳಿದ್ದು, ಒಂದರ ಬೆಲೆ 198.23 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 792.92/- ರೂಪಾಯಿ ಇರುತ್ತದೆ. 7)ಕಿಂಗ್ ಪಿಶರ್ 330 ಎಮ್.ಎಲ್ ನ 09 ಟೀನ್ಬೀಯರ್ ಬಾಟಲಗಳಿದ್ದು, ಒಂದರ ಬೆಲೆ 95 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 855/- ರೂಪಾಯಿ ಇರುತ್ತದೆ. 8)ಇಂಪೆರಿಯಲ್ ಬ್ಲೂ 180 ಎಮ್.ಎಲ್ ನ 03ವಿಸ್ಕಿ ಬಾಟಲಗಳಿದ್ದು, ಒಂದರ ಬೆಲೆ 198.21 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 594.63/- ರೂಪಾಯಿ ಇರುತ್ತದೆ. 9) ಃಚಿಛಿಚಿಡಿಜು 275 ಎಮ್.ಎಲ್ ನ 06 ಬಾಟಲಗಳಿದ್ದು, ಒಂದರ ಬೆಲೆ 95 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 570/- ರೂಪಾಯಿ ಇರುತ್ತದೆ. 10)ಬ್ರಿಜರ್ 275 ಎಮ್.ಎಲ್ ನ 08 ಬಾಟಲಗಳಿದ್ದು, ಒಂದರ ಬೆಲೆ 120 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 960/- ರೂಪಾಯಿ ಇರುತ್ತದೆ. 11)ಬ್ಯಾಗ್ ಪೈಪರ್ 180 ಎಮ್.ಎಲ್ ನ 03ವಿಸ್ಕಿ ಟೇಟ್ರಾ ಪ್ಯಾಕಗಳಿದ್ದು, ಒಂದರ ಬೆಲೆ 106.23 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 318.69/- ರೂಪಾಯಿ ಇರುತ್ತದೆ. 12) ಒಲ್ಡ್ಟವರೆನ್ 180 ಎಮ್.ಎಲ್ ನ 06ವಿಸ್ಕಿ ಟೇಟ್ರಾ ಪ್ಯಾಕಗಳಿದ್ದು, ಒಂದರ ಬೆಲೆ 86.75 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 520.50/- ರೂಪಾಯಿ ಇರುತ್ತದೆ. 13) ಯು.ಎಸ್ ವಿಸ್ಕಿ 90 ಎಮ್.ಎಲ್ ನ 14 ಪ್ಲಾಸ್ಟೀಕ್ ಬಾಟಲಗಳಿದ್ದು, ಒಂದರ ಬೆಲೆ 35.13 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 491.82 ರೂಪಾಯಿ ಇರುತ್ತದೆ. 14ಆಫಿಸರ್ ಚಾಯಿಸ್ 180 ಎಮ್.ಎಲ್ ನ 04ವಿಸ್ಕಿ ಟೇಟ್ರಾ ಪ್ಯಾಕಗಳಿದ್ದು, ಒಂದರ ಬೆಲೆ 106.23 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 424.92/- ರೂಪಾಯಿ ಇರುತ್ತದೆ. 15)ಸಿಗ್ನೆಚರ್ 180 ಎಮ್.ಎಲ್ ನ 01 ಬಾಟಲ ಇದ್ದು ಅದರ ಬೆಲೆ 431.68 ಇರುತ್ತದೆ. ಹೀಗೆ ಒಟ್ಟು 29 ಲೀಟರ್ 410 ಎಮ್.ಎಲ್ ನ 10,475.16/- ರೂಪಾಯಿ ಮೌಲ್ಯದ ವಿವಿಧ ಮಾದರಿಯ ಸರಾಯಿ ಇದ್ದು. ಈ ವೇಳೆಯಲ್ಲಿ ನಾನು ಸದರಿ ವ್ಯಕ್ತಿಗಳಿಗೆ ಈ ಸರಾಯಿ ಮಾರಾಟ ಮಾಡಲು ಯಾವುದಾದರು ಇಲಾಖೆಯಿಂದ ಅನುಮತಿ ಪಡೆದುಕೊಂಡಿದ್ದಿಯಾ ಅಂತ ವಿಚಾರಿಸಲು ಅವರುಗಳ ಪೈಕಿ ಸೋಮನಾಥ ಮಲ್ಲಾಪೂರ ಇತನು ನಾವು ಯಾವುದೇ ಇಲಾಖೆಯಿಂದ ಅನುಮತಿ ಪಡೆದುಕೊಂಡಿರುವುದಿಲ್ಲ ಅಂತ ತಿಳಿಸಿರುತ್ತಾನೆ. ಸದರಿ ಎಲ್ಲಾ ವಸ್ತುಗಳನ್ನು ಜಪ್ತಿ ಮಾಡಿ ಹಾಗೂ ಆರೋಪಿತರನ್ನು ವಶಕ್ಕೆ ತೆಗೆದುಕೊಂಡು ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಭಾಲ್ಕಿ ನಗರ ಠಾಣೆ ಪ್ರಕರಣ ಸಂ:156/2022 ಕಲಂ78(3) ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ 20/09/2022 ರಂದು ಪಿಐ ಭಾಲ್ಕಿ ನಗರ ಠಾಣೆಯಲ್ಲಿದ್ದಾಗ ಭಾಲ್ಕಿಯ ಪಾಪವಾ ಚೌಕ ಹತ್ತಿರ ಇಬ್ಬರು ವ್ಯಕ್ತಿಗಳು 1 ರೂ ಗೆ 80 ರೂ ಕೊಡುತ್ತೇನೆ. ಇದು ಕಲ್ಯಾಣಿ ಮಟಕಾ ಇರುತ್ತದೆ ಅಂತಾ ಹೇಳಿ ಜನರಿಗೆ ಕೂಗಿ ಕೂಗಿ ಕರೆದು ಅವರಿಂದ ಹಣ ಪಡೆದು ಮಟಕಾ ನಂಬರಿನ ಚೀಟಿ ಬರೆದುಕೊಳ್ಳುತ್ತಿದ್ದಾನೆ ಅಂತಾ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿ ಹಾಗೂ ಪಂಚರೊಂದಿಗೆ ಭಾಲ್ಕಿಯ ಪಾಪವಾ ಚೌಕ ಹತ್ತಿರ 1520 ಗಂಟೆಗೆ ಕೂಗಿ ಕರೆದು ಅವರಿಂದ ಹಣ

ಪಡೆದು ಮಟಕಾ ನಂಬರಿನ ಚೀಟಿ ಬರೆದುಕೊಳ್ಳುತ್ತಿರುವುದನ್ನು ನೋಡಿ ಖಚೀತ ಪಡಿಸಿಕೊಂಡು ಸದರಿ ವ್ಯಕ್ತಿಗಳ ಮೇಲೆ 1530 ಪಿ.ಎಮ್ ಗಂಟೆಗೆ ದಾಳಿ ಮಾಡಿ ಹಿಡಿದು ಸದರಿ ವ್ಯಕ್ತಿಗೆ ಹೆಸರು ವಿಚಾರಿಸಲು ತನ್ನ ಹೆಸರು 1] ವಿಲಾಸ ತಂದೆ ನಾಮದೇವ ವಾಗಮಾರೆ ವಯಸ್ಸು 36 ರ್ಷ ಉ; ಕೂಲಿ ಕೆಲಸ ಸಾ; ವಿಜಯಮಹಾಂತೇಶ್ವರ ಗಲ್ಲಿ ಭಾಲ್ಕಿ ಅಂತಾ ತಿಳಿಸಿದನು. ನಂತರ ಪಂಚರ ಸಮಕ್ಷಮ ವಿಲಾಸ ಇವನ ವಶದಿಂದ 1] ನಗದು ಹಣ 1750/- ರೂ 2] 3 ಮಟಕಾ ಚೀಟಿ 3] ಒಂದು ಬಾಲ ಪೆನ್ನ 4] ಒಂದು ಮೋಬೈಲ್ ಅ.ಕಿ 1000 ರೂ ಜಪ್ತಿ ಮಾಡಿಕೊಂಡು, 2] ಬಾಲಾಜಿ ತಂದೆ ಮಲ್ಲಿಕರ್ಜುನ ಸೋಲಾಪೂರೆ ವಯಸ್ಸು 42 ರ್ಷ ಉ; ಡ್ರೈವರ ಕೆಲಸ ಸಾ; ಹನುಮಾನ ಕಟ್ಟೆ ಹತ್ತಿರ ಉದಗೀರ ಅಂತ ತಿಳಿಸಿದನು. ನಂತರ ಪಂಚರ ಸಮಕ್ಷಮ ಬಾಲಾಜಿ ಇವನ ವಶದಿಂದ 1] ನಗದು 2150/- ರೂ, 2] 3 ಮಟಕಾ ಚಿಟಿ, 3] ಒಂದು ಬಾಲ ಪೆನ್ 4] ಒಂದು ಮೋಬೈಲ್ ಅ.ಕಿ 1000/- ರೂ ಇದ್ದು ಸದರಿಯವರಿಗೆ ಪುನಃ ವಿಚಾರಣೆ ಮಾಡಲು ತಿಳಿಸಿದ್ದೆನೆಂದರೆ ತಾನು 1 ರೂ ಗೆ 80 ರೂ ಕೊಡುತ್ತೇವೆ ಅಂತಾ ಹೇಳಿ ಜನರಿಗೆ ಕೂಗಿ ಕೂಗಿ ಕರೆದು ಅವರಿಂದ ಹಣ ಪಡೆದು ಮಟಕಾ ನಂಬರ ಬರೆದುಕೊಳ್ಳುತ್ತಿರುವುದಾಗಿ ಒಪ್ಪಿಕೊಂಡಿದರಿಂದ ಸದರಿಯವರಿಗೆ ನಾನು ವಶಕ್ಕೆ ಪಡೆದುಕೊಂಡಿರುತ್ತೇನೆ. ಆರೋಪಿತರ ವಶದಿಂದ ಪಂಚರ ಸಮಕ್ಷಮ ಜಪ್ತಿ ಮಾಡಿದ ಮುದ್ದೆ ಮಾಲು, ಹಾಗೂ ಆರೋಪಿತರಿಗೆ ಠಾಣೆಗೆ ತಂದು ಪ್ರಕರಣ ದಾಖಲಿಸಿ ತನಖೆ ಕೈಕೊಳ್ಳಲಾಗಿದೆ.

**ಬೀದರ ನಗರ ಪೊಲೀಸ ಠಾಣೆ ಪ್ರಕರಣ ಸಂಖ್ಯೆ : 48/2022 ಕಲಂ 78(3) ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ 20/09/2022 ರಂದು ಮಧ್ಯಾಹ್ನ 15:00 ಗಂಟೆ ಸುಮಾರಿಗೆ ಪಿಎಸ್ಐ ಠಾಣೆಯಲ್ಲಿದ್ದಾಗ ಒಂದು ಖಚಿತ ಮಾಹಿತಿ ಬಂದಿದೆನೆಂದರೆ ಬೀದರ ನಗರದ ರಾವ ತಾಲೀಮ ಓಣಿಯಲ್ಲಿ ಬಾಗವಾನ ಗಲ್ಲಿ ಕ್ರಾಸ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ನಿಂತು ಹೊಗಿ ಬರುವ ಜನರಿಗೆ ಕರೆದು ತನ್ನ ಹತ್ತಿರ ಮಟಕಾ ಜೂಜಾಟ ಆಡಿದರೆ 1/-ರೂ ಗೆ 90/-ರೂ ಕೊಡುತ್ತೇನೆ ಅಂತ ಕರೆದು ಜನರಿಂದ ಹಣ ಪಡೆದು ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿ ಬರೆದುಕೊಡುತ್ತಿದ್ದಾನೆ ಅಂತ ಖಚಿತ ಮಾಹಿತಿ ಮೆರೆಗೆ ಪಂಚರು ಹಾಗೂ ಸಿಬ್ಬಂದಿಯವರೊಂದಿಗೆ ಬಾಗವಾನ ಗಲ್ಲಿ ಕ್ರಾಸ ಹತ್ತಿರ ಹೋಗಿ ಮರೆಯಲ್ಲಿ ನಿಂತು ನೋಡಲು ಅಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ನಿಂತು ಜನರಿಂದ ಹಣ ಪಡೆದು ಅಂಕಿ ಸಂಖ್ಯೆ ಬರೆದ ಚೀಟಿ ಬರೆದು ಕೊಡುತ್ತಿದ್ದ ಬಗ್ಗೆ ಖಚಿತ ಪಡಿಸಿಕೊಂಡು ಸದರಿ ವ್ಯಕ್ತಿಯ ಮೇಲೆ ದಾಳಿ ಮಾಡಿ ಆರೋಪಿತನಿಗೆ ಹಿಡಿದು ಅವನ ಹೆಸರು ಮತ್ತು ವಿಳಾಸ ವಿಚಾರಿಸಲು ಅವನು ತನ್ನ ಹೆಸರು ಅಲ್ ಹಜ್ಜ್ ತಂದೆ ಸಿರಾಜ ಅಹ್ಮೆದ ವಯ:35 ವರ್ಷ ಜಾ:ಮುಸ್ಲಿಂ ಉ:ಹೂವಿನ ವ್ಯಾಪಾರ ಸಾ:ಬಾಗವಾನ ಗಲ್ಲಿ ಬೀದರ ಅಂತ ತಿಳಿಸಿ ತಮ್ಮ ಹತ್ತಿರ ಮಟಕಾ ಜೂಜಾಟದಲ್ಲಿ ತೊಡಗಿಸಿದ ನಗದು ಹಣ 820/-ರೂ ಮತ್ತು ಒಂದು ಬಾಲ ಪೆನ್ನು, ಮತ್ತು 5 ಮಟಕಾ ಚೀಟಿಗಳು ಹಾಜರು ಪಡಿಸಿದನು ಸದರಿ ಸ್ವತ್ತು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಸದರಿ ಮುದ್ದೆ ಮಾಲು ಹಾಗೂ ಆರೋಪಿತನಿಗೆ ಠಾಣೆಗೆ ತಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.